"ಮಧುರ ಮಕ್ಕಳೇ- ತಂದೆಗೆ ತಮ್ಮ ಸ್ಥಿತಿಯ ಸಮಾಚಾರವನ್ನು ತೆರೆದ ಹೃದಯದಿಂದ ತಿಳಿಸಿ, ತೆರೆದ ಅಥವಾ ಸತ್ಯಹೃದಯದಲ್ಲಿಯೇ ತಂದೆಯ ನೆನಪು ನಿಲ್ಲಲು ಸಾಧ್ಯ"

ಪ್ರಶ್ನೆ: ಈ ಸಮಯದಲ್ಲಿ ಕಿರಿಯರು-ಹಿರಿಯರು ಎಲ್ಲರ ವಾನಪ್ರಸ್ಥ ಸ್ಥಿತಿಯಾಗಿದ್ದರೂ ನೀವು ಯಾವ ಮಾತನ್ನು ಬಾಯಿಂದ ಹೇಳಬಾರದು?

ಉತ್ತರ: ಬಾಬಾ, ಈಗ ಬೇಗ ಮಾಡಿ, ನಾವು ಮನೆಗೆ ಹೋಗಬೇಕು. ಇಲ್ಲಂತೂ ಬಹಳ ದುಃಖವಿದೆ ಎಂದು ಮಕ್ಕಳು ಹೇಳುತ್ತಾರೆ. ಅದಕ್ಕೆ ಬಾಬಾ ತಿಳಿಸುತ್ತಾರೆ- ನೀವು ಮಕ್ಕಳು ಈ ರೀತಿ ಎಂದೂ ಸಹ ಹೇಳಲೇಬಾರದು ಏಕೆಂದರೆ ನೀವೀಗ ಈಶ್ವರನ ಸಮ್ಮುಖದಲ್ಲಿ ಕುಳಿತಿದ್ದೀರಿ. ಈಗ ನಿಮಗೆ ಶೀತಲವಾದ ಮಡಿಲು ಸಿಕ್ಕಿದೆ. ಈ ಸಮಯದಲ್ಲಿ ನೀವು ಶ್ರೇಷ್ಠಾತಿಶ್ರೇಷ್ಠರಾಗಿದ್ದೀರಿ. ಸತ್ಯಯುಗದಲ್ಲಿಯೂ ಸಹ ಪದವಿಯು ಇಲ್ಲಿಗಿಂತಲೂ ಕಡಿಮೆಯಾಗಿಬಿಡುವುದು. ಅಲ್ಲಿ ದೈವೀ ಸಂತಾನರಾಗುತ್ತೀರಿ ಆದರೆ ಈಶ್ವರೀಯ ಸಂತಾನರಲ್ಲ ಆದ್ದರಿಂದ ನೀವು ಅವಸರ ಮಾಡಬಾರದು.

ಗೀತೆ: ನಿಮ್ಮನ್ನು ಕರೆಯಲು ನನ್ನ ಮನಸ್ಸು ಹಾತೊರೆಯುತ್ತಿದೆ..........

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳು ಈಗ ಅರಿತುಕೊಂಡಿರಿ. ಭಕ್ತರು ಭಗವಂತನನ್ನು ಕರೆಯುತ್ತಾರೆ. ಈಗ ನೀವಂತೂ ಭಕ್ತರಲ್ಲ, ಮಕ್ಕಳಾಗಿದ್ದೀರಿ. ಮಕ್ಕಳು ನೆನಪು ಮಾಡುತ್ತಾರೆ ಮತ್ತು ಬರೆಯುತ್ತಾರೆ- ಬಾಬಾ, ನಾವು ಸಮ್ಮುಖದಲ್ಲಿ ಕೇಳಲು ಬಯಸುತ್ತೇವೆ. ಬಾಬಾ ನಾವು ತಮ್ಮಿಂದ ಸಮ್ಮುಖದಲ್ಲಿ ಕೇಳಬೇಕೆಂದು ಅರ್ಜಿಯನ್ನು ಸಲ್ಲಿಸುತ್ತಿರುತ್ತಾರೆ. ಬ್ರಹ್ಮಾರವರ ಮುಖದ ಹೊರತು ನೇರವಾಗಿ ಕೇಳುವುದಂತೂ ಪರಿಶ್ರಮವಿದೆ. ತಂದೆಯು ಹಿಂದಿನ ಕಲ್ಪದ ತರಹ ಬಂದಿದ್ದಾರೆಂದು ನೀವು ಮಕ್ಕಳಿಗೆ ಗೊತ್ತಿದೆ. ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣ ಕುಲಭೂಷಣರು ಎಂದು ಎಷ್ಟು ಒಳ್ಳೆಯ ಹೆಸರನ್ನು ಕೊಡಲಾಗಿದೆ. ಬ್ರಹ್ಮಾಕುಮಾರ-ಕುಮಾರಿಯರಂತೂ ಅನೇಕರಿದ್ದೀರಿ, ಅವರಿಗೇ ಸುಖದ ಸಾಗರನೆಂದೂ ಹೇಳಲಾಗುತ್ತದೆ. ದುಃಖಹರ್ತ-ಸುಖಕರ್ತ ಎನ್ನುವ ಗಾಯನವೂ ಇದೆ. ಅವರಂತೂ ಶಿವತಂದೆ ಆಗಿದ್ದಾರೆ ಆದರೆ ಅವರಿಗೆ ಅನೇಕ ಭಿನ್ನ-ಭಿನ್ನ ಹೆಸರುಗಳನ್ನು ಕೊಟ್ಟಿದ್ದಾರೆ ಏಕೆಂದರೆ ಗಾಯನವಂತೂ ಬಹಳ ಇದೆಯಲ್ಲವೆ. ಹರಹರ ಅರ್ಥಾತ್ ದುಃಖವನ್ನು ಹರಣ ಮಾಡು ಎಂದು ಕೇಳುತ್ತಾರೆ. ಇದನ್ನು ಭಗವಂತನಿಗಾಗಿಯೇ ಹಾಡುತ್ತಾರೆ ಆದರೆ ಭಗವಂತನ ಪೂರ್ಣ ಪರಿಚಯವಿಲ್ಲದೆ ಇರುವ ಕಾರಣ ಬ್ರಹ್ಮಾ, ವಿಷ್ಣು, ಶಂಕರನಿಗೆ ಹೇಳಿಬಿಡುತ್ತಾರೆ. ದೇವ ದೇವ ಮಹಾದೇವ. ಶಿವನನ್ನು ಮರೆತು ಶಂಕರನಿಗೆ ಹರಹರ ಮಹಾದೇವ ಎಂದು ಹೇಳಿಬಿಡುತ್ತಾರೆ. ಬ್ರಹ್ಮ ಮತ್ತು ವಿಷ್ಣುವನ್ನು ಮಹಾದೇವ ಎಂದು ಹೇಳಲು ಸಾಧ್ಯವಿಲ್ಲ. ಅವರಿಬ್ಬರೂ ಸ್ಥೂಲಪಾತ್ರದಲ್ಲಿ ಬರುತ್ತಾರೆ. ಶಂಕರನು ಸೂಕ್ಷ್ಮವತನದಲ್ಲಿರುತ್ತಾರೆ ಅಂದಮೇಲೆ ದುಃಖವನ್ನು ಹರಣ ಮಾಡುವ ಪತಿತ-ಪಾವನನಂತೂ ಒಬ್ಬ ನಿರಾಕಾರನೇ ಆಗಿದ್ದಾರೆ. ಶಂಕರನಿಗೆ ಪತಿತ-ಪಾವನೆಂದು ಹೇಳಲು ಸಾಧ್ಯವಿಲ್ಲ. ಮಹಿಮೆಯೆಲ್ಲವೂ ಒಬ್ಬರದೇ ಆಗಿದೆ. ವಿಷ್ಣುವಿನ ಎರಡು ರೂಪ ಲಕ್ಷ್ಮೀ-ನಾರಾಯಣ ಅಥವಾ ರಾಧಾ-ಕೃಷ್ಣ ಆಗಿದ್ದಾರೆ. ಇವರದು ಬೇರೆ-ಬೇರೆ ಜನ್ಮವಾಗುತ್ತದೆ. ವಿಷ್ಣು ಅವತರಣೆಯೆಂದೂ ಸಹ ಗಾಯನವಿದೆ. ಚತುರ್ಭುಜಗಳನ್ನು ತೋರಿಸುತ್ತಾರೆ ಆದರೆ ಲಕ್ಷ್ಮೀ-ನಾರಾಯಣರೇ ಸ್ವರ್ಗದಲ್ಲಿ ಮೊದಲು ರಾಧಾ-ಕೃಷ್ಣ ಆಗಿರುತ್ತಾರೆಂದು ಯಾರಿಗೂ ಗೊತ್ತಿಲ್ಲ, ಇದನ್ನು ನೀವೇ ತಿಳಿದುಕೊಂಡಿದ್ದೀರಿ. ಜೊತೆಗೆ ಇದೂ ಸಹ ನಿಮಗೆ ಗೊತ್ತಿದೆ- ಮಾಯೆಯ ಅತಿದೊಡ್ಡ ಬಿರುಗಾಳಿಯು ಸೂಕ್ಷ್ಮದಲ್ಲಿ ಬರುತ್ತವೆ, ಮಾಯೆಯು ಮರೆಸಿಬಿಡುತ್ತದೆ. ಬಹಳ ಬಿರುಗಾಳಿಯನ್ನು ತರುತ್ತದೆ ಅಂದಾಗ ಯಾವುದೇ ಮಾತನ್ನು ತೆರೆದಹೃದಯದಿಂದ ಮಕ್ಕಳು ಕೇಳುತ್ತೀರೆಂದರೆ ಪ್ರಶ್ನೆಗೆ ಉತ್ತರ ಸಿಕ್ಕಿಬಿಡುತ್ತದೆ. ಬಿರುಗಾಳಿಗಳೂ ಸಹ ಅನೇಕ ಪ್ರಕಾರದಲ್ಲಿ ಬರುತ್ತವೆ. ಕನಸು, ಕೊಳಕು ವಿಕಲ್ಪ ಅನೇಕ ಪ್ರಕಾರದಲ್ಲಿ ಬರುತ್ತದೆ. ಅತಿವೇಗವಾಗಿ ಬರುವುದಕ್ಕೆ ಬಿರುಗಾಳಿ ಎಂದು ಹೇಳಲಾಗುತ್ತದೆ. ಈ ಬ್ರಹ್ಮಾರವರಂತೂ ಪ್ರಸಿದ್ಧವಾಗಿದ್ದಾರೆ ಉಳಿದಂತೆ ಇವರಲ್ಲಿ ಯಾವಾಗ ತಂದೆಯು ಪ್ರವೇಶ ಮಾಡಿದರೋ ಆಗಿನಿಂದ ಬಹಳಷ್ಟು ಪ್ರಸಿದ್ಧವಾಗಿಬಿಟ್ಟಿದ್ದಾರೆ. ಮನುಷ್ಯರು ಎಂತೆಂತಹ ದೇಶವೋ ಅಂತಹ ವೇಷವೂ ಇರುತ್ತದೆ. ಚಹರೆಯ ಬಣ್ಣವೂ ಸಹ ಬದಲಾಗಿಬಿಡುತ್ತದೆ. ಈಗಂತೂ ನೋಡಿ- ಕೆಲವರು ಕುರುಡರು, ಕುಂಟರು, ಕೆಲವರು ಕುಬ್ಜರು, ಆದರೆ ಸತ್ಯಯುಗದಲ್ಲಂತೂ ಸ್ವಾಭಾವಿಕ ಸೌಂದರ್ಯವಿರುತ್ತದೆ ಏಕೆಂದರೆ ಪಂಚತತ್ವಗಳೂ ಸತೋಪ್ರಧಾನವಾಗಿರುತ್ತವೆ. ಈ ಜ್ಞಾನವನ್ನು ಸಮ್ಮುಖದಲ್ಲಿ ಕೇಳುವುದಕ್ಕಾಗಿ ಮಕ್ಕಳು ಕರೆಯುತ್ತೀರಿ. ಗೀತೆಯಲ್ಲಿಯೂ ಸಹ ಕೆಲವೊಂದು ಮಾತುಗಳು ಸರಿಯಾಗಿದೆ. ಹೇಗೆ ದೇವತಾ ಧರ್ಮವು ಪ್ರಾಯಃಲೋಪವಾಗಿದ್ದರೂ ಸಹ ನೆನಪಾರ್ಥವಾಗಿ ಮಂದಿರಗಳಂತೂ ಇದೆಯಲ್ಲವೆ. ಇದು ಧರ್ಮದವರ ನೆನಪಾರ್ಥವಾಗಿದೆ. ಅವಶ್ಯವಾಗಿ ಶ್ರೇಷ್ಠಾತಿಶ್ರೇಷ್ಠನೆಂದು ಒಬ್ಬ ಭಗವಂತನಿಗೆ ಹೇಳಲಾಗುತ್ತದೆ ಎಂದು ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಅವರದೇ ಗಾಯನವಿದೆ ಮತ್ತು ಆ ಗಾಯನವೂ ಸಹ ಸಂಗಮಯುಗದ್ದಾಗಿದೆ, ಯಾವಾಗ ಆತ್ಮರು ಮತ್ತು ಪರಮಾತ್ಮನ ಮಿಲನವಾಗುತ್ತದೆ. ಆತ್ಮಗಳು ಅನೇಕರಿದ್ದಾರೆ ವೃದ್ಧಿಯಾಗುತ್ತಾ ಹೋಗುತ್ತದೆ. ನೀವು ಮಕ್ಕಳು ಸಮ್ಮುಖದಲ್ಲಿ ಕೇಳುತ್ತಿದ್ದೀರಿ, ಅನ್ಯರಿಗೂ ಸಹ ಸಮ್ಮುಖದಲ್ಲಿ ಕೇಳಲು

ಮನಸ್ಸಾಗುತ್ತದೆ ಆದರೆ ಬಂಧನದಲ್ಲಿರುವುದರ ಕಾರಣ ಇಲ್ಲಿ ಬರಲು ಆಗುವುದಿಲ್ಲ. ಮತ್ತ್ಯಾವುದೇ ಸತ್ಸಂಗಗಳಲ್ಲಿ ಹೋಗಲು ಎಂದೂ ಯಾರನ್ನೂ ತಡೆಯುವುದಿಲ್ಲ. ಬಾಂಬೆಯಲ್ಲಿ ಗೀತೆಯನ್ನು ತಿಳಿಸುತ್ತಾರೆ. ಅಲ್ಲಿಗೆ ಯಾವುದೇ ಧರ್ಮದವರು ಹೋಗಬಹುದು. ಅಲ್ಲಿ ಯಾವುದೇ ಶುಲ್ಕವಿಲ್ಲ. ಭಿನ್ನ-ಭಿನ್ನ ಗುರುಗಳ ಬಳಿ ಹೋಗುತ್ತಿರುತ್ತಾರೆ- ಎಲ್ಲಿಯಾದರೂ ಸಹಜಮಾರ್ಗವು ಸಿಕ್ಕಿಬಿಡುವುದೇನೋ ಎಂದು. ಮುಕ್ತಿ ಮತ್ತು ಜೀವನ್ಮುಕ್ತಿಯ ಮಾರ್ಗವು ಯಾರಿಗೂ ಗೊತ್ತಿಲ್ಲ ಆದ್ದರಿಂದ ತುಂಬಾ ಹುಡುಕುತ್ತಾರೆ. ಇಲ್ಲಂತೂ ಯಾರೂ ಗುರು-ಗೋಸಾಯಿಗಳಿಲ್ಲ. ಇಲ್ಲಿ ಬ್ರಹ್ಮಾಕುಮಾರ-ಕುಮಾರಿಯರಷ್ಟೇ. ಯಾವುದೇ ಮಹಾತ್ಮರಿಲ್ಲ. ಹೇಗೆ ನೀವೋ ಹಾಗೆಯೇ ಈ ದಾದಾರವರೂ ಸಹ ಇದ್ದಾರೆ, ಯಾವುದೇ ವ್ಯತ್ಯಾಸವಿಲ್ಲ. ವೇಷ ಮುಂತಾದುವುಗಳಲ್ಲಿಯೂ ಸಹ ಯಾವುದೇ ಅಂತರವಿಲ್ಲ. ಕೆಲವೊಮ್ಮೆ ಈ ಶಾಲು ಇತ್ಯಾದಿಗಳನ್ನೂ ಸಹ ತೆಗೆದುಹಾಕುತ್ತೇನೆ ಆದರೆ ನಾಟಕದನುಸಾರ ಇದು ಅಫಿಷಿಯಲ್ ಡ್ರೆಸ್ ಆಗಿದೆ. ಈ ವಸ್ತ್ರವನ್ನಂತೂ ನೋಡಬಾರದು. ಬುದ್ಧಿಯು ಶಿವತಂದೆಯ ಕಡೆ ಹೋಗಿಬಿಡಬೇಕು. ಮತ್ತೆಲ್ಲಾ ಮನುಷ್ಯರು ಶರೀರವನ್ನು ನೋಡುತ್ತಾರೆ ಆದರೆ ನೀವು ತಮ್ಮ ಶರೀರವನ್ನೂ ಮರೆಯುತ್ತೀರಿ ಮತ್ತು ಈ ದಾದಾರವರ ಶರೀರವನ್ನೂ ಮರೆಯುತ್ತೀರಿ, ಆತ್ಮಾಭಿಮಾನಿಗಳಾಗಬೇಕಾಗಿದೆ, ಇವರ ಶರೀರವನ್ನೂ ನೆನಪು ಮಾಡಬಾರದು ಅಂದರೆ ಶಿವತಂದೆಯು ಇವರ ಮುಖಾಂತರ ನಮಗೆ ರಾಜಯೋಗವನ್ನು ಕಲಿಸುತ್ತಾರೆ. ಅವರೇ ಜ್ಞಾನಸಾಗರ, ತ್ರಿಕಾಲದರ್ಶಿಯಾಗಿದ್ದಾರೆ. ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ಈ ಸಮಯದಲ್ಲಿ ಕುಳಿತು ತಿಳಿಸುತ್ತಾರೆ.

ವಯಸ್ಸಾದ ವೃದ್ಧರಿಗೂ ಸಹ ಈ ಜ್ಞಾನವು ಬಹಳ ಸಹಜವಾಗಿದೆ. ಆ ಶಾಲೆಗಳಲ್ಲಂತೂ ವೃದ್ಧರು ಏನೂ ಅರಿತುಕೊಳ್ಳಲು ಸಾಧ್ಯವಿಲ್ಲ. ಇದು ಎಲ್ಲರಿಗಾಗಿ ಸಹಜವಾಗಿದೆ. ತಂದೆಯು ಕೇವಲ ನನ್ನನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಹೇಗೆ ಮನುಷ್ಯರು ಶರೀರ ಬಿಡುವಂತಹ ಸ್ಥಿತಿಯಲ್ಲಿದ್ದಾಗ ಅವರಿಗೆ ರಾಮ-ರಾಮ ಎಂದು ಹೇಳಿ ಎಂದು ಮಂತ್ರವನ್ನು ಕೊಡುತ್ತಾರೆ. ಅನೇಕರು ವಾನಪ್ರಸ್ಥದ ನಂತರವೇ ಗುರುವಿನ ಮಂತ್ರವನ್ನು ತೆಗೆದುಕೊಳ್ಳುತ್ತಾರೆ ಆದರೆ ಈಗ ತಂದೆಯು ತಿಳಿಸುತ್ತಾರೆ- ಮಕ್ಕಳೇ, ಈ ಇಡೀ ಹಳೆಯ ಪ್ರಪಂಚ ವಿನಾಶವಾಗಲಿದೆ. ವೃದ್ಧರು, ಯುವಕರು, ಹಿರಿಯರು-ಕಿರಿಯರು ಎಲ್ಲರ ವಾನಪ್ರಸ್ಥ ಸ್ಥಿತಿಯಾಗಿದೆ. ಹೀಗೆ ಮತ್ತ್ಯಾರೂ ಹೇಳಲು ಸಾಧ್ಯವಿಲ್ಲ. ಮೃತ್ಯುವಿನ ಶಬ್ಧವನ್ನು ಕೇಳಿದರೆ ಸಾಕು ಎಲ್ಲರ ಮೃತ್ಯುವನ್ನು ತರಲು ತಯಾರಾಗಿದ್ದೀರೇನು ಎಂದು ಮನುಷ್ಯರು ಕೇಳುತ್ತಾರೆ. ಹೌದು ಎಲ್ಲರ ಮೃತ್ಯುವಂತೂ ಆಗಲೇಬೇಕಾಗಿದೆ. ಕೆಲವು ಮಕ್ಕಳು ಬಾಬಾ ನಾವು ಇಲ್ಲಿ ಇನ್ನೂ ಎಲ್ಲಿಯತನಕ ಇರುವುದು, ನಾವು ಬೇಗ ಹೋಗಬೇಕು. ಇಲ್ಲಿ ಬಹಳ ದುಃಖವಿದೆಯೆಂದು ಹೇಳುತ್ತಾರೆ. ಮುಂದೆಹೋದಂತೆ ಅನೇಕರು ಈ ರೀತಿ ಹೇಳುತ್ತಾರೆ. ಅದಕ್ಕೆ ತಂದೆಯು ತಿಳಿಸುತ್ತಾರೆ- ಈ ರೀತಿ ಏಕೆ ಹೇಳುತ್ತೀರಿ? ಅರೆ! ಈ ಸಮಯದಲ್ಲಂತೂ ನೀವು ಈಶ್ವರನ ಸಮ್ಮುಖದಲ್ಲಿದ್ದೀರಿ. ನಂತರದಲ್ಲಂತು ನಿಮ್ಮ ಈ ಡಿಗ್ರಿಯು ಕಡಿಮೆಯಾಗುತ್ತಾ ಹೋಗುವುದು. ಸತ್ಯಯುಗದಲ್ಲಿ ಹೋಗಿ ನೀವು ದೈವೀ ಸಂತಾನರಾಗುತ್ತೀರಿ. ಈಗ ಈ ಶೀತಲ ಮಡಿಲು ಚೆನ್ನಾಗಿದೆ. ಸ್ವರ್ಗದಲ್ಲಂತೂ ಇರುವುದೇ ಶೀತಲ ಆದರೆ ಇಲ್ಲಂತೂ ತಾಪವನ್ನೂ ಸಹ ಶೀತಲವನ್ನಾಗಿ ಮಾಡಲಾಗುತ್ತದೆ ಅಂದಮೇಲೆ ಇದು ಚೆನ್ನಾಗಿರುತ್ತದೆ. ಈಗ ಅವಸರ ಮಾಡಬೇಡಿ. ಈಗಂತೂ ನಾವು ಶ್ರೇಷ್ಠಾತಿಶ್ರೇಷ್ಠರಾಗಿದ್ದೇವೆ. ನಿಮ್ಮ ಹೆಸರಿನ ಮಹಿಮೆ ಈ ಸಮಯದ್ದಾಗಿದೆ. ಕಲಿಯುಗದಲ್ಲಿಯೂ ಸಹ ಇಲ್ಲಿಯ ನಿಮ್ಮ ಹೆಸರಿನ ಮಹಿಮೆಯಲ್ಲಿ ಈಗಲೂ ಸಹ ಬ್ರಾಹ್ಮಣರಿಗೆ ಅಷ್ಟು ಮಾನ್ಯತೆಯಿದೆ. ದಿಲ್ವಾಡಾ ಮಂದಿರವೂ ಸಹ ಈ ಸಮಯದ ನೆನಪಾರ್ಥವಾಗಿದೆ. ಇಡೀ ಸೃಷ್ಟಿಯ ಹೃದಯವನ್ನು ಗೆಲ್ಲುವವರು ತಂದೆಯಾಗಿದ್ದಾರೆ. ದಿಲ್ವಾಡಾ ಮಂದಿರವು ಎಲ್ಲರಿಗಾಗಿ ಇದೆ. ಆತ್ಮವು ಶರೀರದ ಮುಖಾಂತರ ಬಾಬಾ ಬನ್ನಿ, ಬಂದು ನಮ್ಮನ್ನು ಹೊಸಬರನ್ನಾಗಿ ಮಾಡಿ. ನಾವು ತುಂಬಾ ಹಳಬರಾಗಿದ್ದೇವೆ ಎಂದು ಕರೆಯುತ್ತದೆ. ಆತ್ಮ ಮತ್ತು ಶರೀರ ಎರಡೂ ಹಳೆಯದಾಗಿದೆ. ಆತ್ಮವು ಬುದ್ಧಿಹೀನ, ಕುರುಡಾಗಿದೆ. ಮನುಷ್ಯರಿಗೆ ಅಂಧರೆಂದು ಹೇಳಲಾಗುವುದಿಲ್ಲ ಏಕೆಂದರೆ ಕಣ್ಣುಗಳಂತೂ ಇವೆಯಲ್ಲವೆ ಆದರೆ ಬುದ್ಧಿಯು ಕುರುಡಾಗಿದೆ. ಆತ್ಮದಲ್ಲಿ ತಂದೆಯನ್ನು ನೆನಪು ಮಾಡುವ ಯಾವ ಬುದ್ಧಿಯಿದೆ ಅದು ಸಂಪೂರ್ಣ ಮರೆತುಹೋಗಿದೆ ಅಂದಾಗ ಗೋಪಿಕೆಯರು ಕೆಲಕೆಲವರು ಕೆಲವೆಡೆಯಿಂದ ಕರೆಯುತ್ತಾರೆ. ಬಂಧನದಲ್ಲಿರುವ ಗೋಪಿಕೆಯರು ಚಿಕ್ಕ-ಚಿಕ್ಕ ಗ್ರಾಮಗಳಿಂದ ಕರೆಯುತ್ತಾರೆ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ಸತ್ಯಯುಗದಲ್ಲಿ ಗೃಹಸ್ಥ ಆಶ್ರಮವಾಗಿತ್ತು, ಪವಿತ್ರವಾಗಿತ್ತು. ಈಗಂತೂ ವಿಷಕ್ಕಾಗಿ ಇಷ್ಟೊಂದು ತೊಂದರೆಯನ್ನು ಕೊಡುತ್ತಾರೆ. ಇಲ್ಲಿ ತಂದೆಯು ನಿರ್ವಿಕಾರಿಗಳನ್ನಾಗಿ ಮಾಡುತ್ತಾರೆ. ನಿರ್ವಿಕಾರಿಗಳಾಗುವುದರಿಂದ ಮತ್ತೇನಾಗುತ್ತೀರಿ ಎಂದೂ ಸಹ ಮನುಷ್ಯರು ತಿಳಿದುಕೊಂಡಿಲ್ಲ. ಸನ್ಯಾಸಿಗಳೂ ಸಹ ಪವಿತ್ರರಾಗಿರಲು ಮನೆ-ಮಠವನ್ನು ಬಿಟ್ಟು ಓಡಿಹೋಗುತ್ತಾರೆ. ಆದರೆ ನಾವು ಪವಿತ್ರರಾಗಿ ಪವಿತ್ರ ಪ್ರಪಂಚದಲ್ಲಿ ಹೋಗುತ್ತೇವೆ ಎಂಬುದನ್ನು ಅವರು ತಿಳಿದಿರುವ ಕಾರಣ ಮತ್ತು ಸ್ವರ್ಗದ ಸುಖವು ಕಾಗವಿಷ್ಟ ಸಮಾನವೆಂದು ತಿಳಿದು ಈ ಮಾತುಗಳನ್ನು ಅವರು ಒಪ್ಪುವುದೇ ಇಲ್ಲ. ಈ ಸಮಯದಲ್ಲಿ ಇಷ್ಟೊಂದು ದುಃಖವಿರುವುದರಿಂದ ಇದಕ್ಕಿಂತ ಮುಕ್ತಿ ಅಥವಾ ಮೋಕ್ಷವೇ ಒಳ್ಳೆಯದೆಂದು ಅವರು ತಿಳಿಯುತ್ತಾರೆ. ನಾಟಕದಲ್ಲಿ ಮೋಕ್ಷವು ಯಾರಿಗೂ ಸಿಗುವುದಿಲ್ಲ ಎಂದು ತಂದೆಯು ತಿಳಿಸಿದ್ದಾರೆ. ಈಗ ಇದನ್ನು ನೀವು ತಿಳಿದುಕೊಂಡಿದ್ದೀರಿ. ತಂದೆಯು ತಿಳಿಸುತ್ತಾರೆ ಕೇವಲ ಇಷ್ಟನ್ನು ನೆನಪು ಮಾಡಿ, ನಮ್ಮ 84 ಜನ್ಮಗಳು ಪೂರ್ಣವಾಯಿತು. ಈಗ ತಂದೆಯು ಕರೆದುಕೊಂಡು ಹೋಗಲು ಬಂದಿದ್ದಾರೆ. ತಂದೆಯನ್ನು ನೆನಪು ಮಾಡದಿದ್ದರೆ ಅನೇಕ ಬಿರುಗಾಳಿಗಳು ಬರುತ್ತವೆ. ನಿರಂತರವಾಗಿ ನೆನಪು ಮಾಡುವುದು ತುಂಬಾ ಪರಿಶ್ರಮವೆಂದು ವಿವೇಕವೂ ಹೇಳುತ್ತದೆ. ಭಲೆ ತಂದೆಯು ನೀವು ಕರ್ಮಯೋಗಿಗಳಾಗಿದ್ದೀರೆಂದು ತಿಳಿಸುತ್ತಾರೆ ಆದರೆ ಇದನ್ನು ನೋಡಿದ್ದೇವೆ, ಕರ್ಮ ಮಾಡುವ ಸಮಯದಲ್ಲಿ ನೆನಪು ಮರೆತುಹೋಗುತ್ತದೆ. ಈ ಸ್ಥಿತಿಯನ್ನು ಪಡೆಯುವುದರಲ್ಲಿ ಸಮಯ ಹಿಡಿಸುತ್ತದೆ ಮತ್ತು ಬಹಳ ಪುರುಷಾರ್ಥ ಮಾಡಬೇಕಾಗುತ್ತದೆ.

ಕಾಲೇಜಿನಲ್ಲಿ ಪುರುಷಾರ್ಥಿ ಮಕ್ಕಳಿಗೆ ಹಗಲು-ರಾತ್ರಿ ಓದುವ ಅಭ್ಯಾಸವಿರುತ್ತದೆ. ಸರ್ಕಾರದಿಂದ ವಿದ್ಯಾರ್ಥಿವೇತನವನ್ನು ಪಡೆಯಬೇಕೆಂದು ಪ್ರಯತ್ನಿಸುತ್ತಾರೆ. ಬಹಳ ತಲೆಕೆಡಿಸಿಕೊಳ್ಳುತ್ತಾರೆ. ವಿದ್ಯಾರ್ಥಿವೇತನ ಸಿಕ್ಕಿದಾಗ ಬಹಳ ಖುಷಿಯಾಗುತ್ತಾರೆ. ಹಾಗೆಯೇ ಇಲ್ಲಿಯೂ ತಂದೆಯು ತಿಳಿಸುತ್ತಾರೆ- ನೀವು ಚೆನ್ನಾಗಿ ಓದಿ ವಿದ್ಯಾರ್ಥಿವೇತನವನ್ನು ಪಡೆಯಿರಿ. ಮೊದಲು ನೀವು ಸಿಂಹಾಸನಾಧಿಕಾರಿ ಆಗಿಬಿಡಿ, ನೆನಪಿನ ಓಟವನ್ನು ಓಡಬೇಕು. ನಿಮಗೆ ಗೊತ್ತಿದೆ- ಈಗ ನಾವು ತಂದೆಯ ಸಮ್ಮುಖದಲ್ಲಿ ಕುಳಿತಿದ್ದೇವೆ. ಈ ರಥದಲ್ಲಿ ಕುಳಿತು ತಂದೆಯು ನೇರವಾಗಿ ಮಕ್ಕಳೇ, ಮಕ್ಕಳೇ ಎಂದು ಮಾತನಾಡುತ್ತಾರೆ. ಬ್ರಹ್ಮಾರವರ ಶರೀರವಂತೂ ನಿಗಧಿತವಾಗಿದೆ. ತಂದೆಯು ತಿಳಿಸುತ್ತಾರೆ- ನಾನು ಆತ್ಮಗಳೊಂದಿಗೆ ಮಾತನಾಡುತ್ತೇನೆ. ಬಾಬಾ ಬನ್ನಿ ಎಂದು ಕರೆಯುತ್ತಿದ್ದಿರಿ ಅಂದಾಗ ಈಗ ನಾನು ಬಂದಿದ್ದೇನೆ. ನಾನೂ ನಿರಾಕಾರನಾಗಿದ್ದೇನೆ, ನೀವಾತ್ಮರು ನಿರಾಕಾರಿಯಾಗಿದ್ದೀರಿ. ನೀವು ಭಕ್ತಿಮಾರ್ಗದಲ್ಲಿ ಭಿನ್ನ-ಭಿನ್ನ ನಾಮ, ರೂಪ, ದೇಶ, ಕಾಲಗಳನ್ನು ಧಾರಣೆ ಮಾಡಿ ನೆನಪು ಮಾಡುತ್ತಾ ಬಂದಿದ್ದೀರಿ. ಈಗ ಸಮ್ಮುಖದಲ್ಲಿ ನಿಮ್ಮೊಂದಿಗೆ ಮಾತನಾಡುತ್ತೇನೆ. ನಿಮಗೆ ತನ್ನ ಶರೀರದ ಆಧಾರವಿದೆ ಆದರೆ ನಾನು ಇವರನ್ನು ಲೋನ್ನ ರೂಪದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಈಗ ಈ ಹಳೆಯ ಶರೀರವನ್ನು ಬಿಡಬೇಕಾಗಿದೆ ಏಕೆಂದರೆ ನಾಟಕವು ಮುಕ್ತಾಯವಾಯಿತು ಆದ್ದರಿಂದ ಈಗ ನಿರಂತರ ತಂದೆಯನ್ನು ನೆನಪು ಮಾಡುವ ಪ್ರಯತ್ನ ಮಾಡಬೇಕು. ಒಂದುವೇಳೆ ಬೇರೆ ಏನಾದರೂ ನೆನಪಿಗೆ ಬರುತ್ತಿರುತ್ತದೆಯೆಂದರೆ ನಂತರ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ಎಷ್ಟು ಸಾಧ್ಯವೋ ಅಷ್ಟು ಅನ್ಯರ ನೆನಪನ್ನು ತೆಗೆದುಹಾಕಿ. ಹೇಗೆ ಮನುಷ್ಯರು ತೀರ್ಥಯಾತ್ರೆಗೆ ಹೋಗುತ್ತಾರೆಂದರೆ ಬುದ್ಧಿಯಲ್ಲಿ ನಾವು ಶ್ರೀನಾಥದ್ವಾರಕ್ಕೆ ಹೋಗುತ್ತೇವೆ ಎನ್ನುವುದೇ ನೆನಪಿರುತ್ತದೆ ಆದರೆ ನಿಮ್ಮದು ಇದು ಸತ್ಯವಾದ ಆತ್ಮಿಕ ಯಾತ್ರೆಯಾಗಿದೆ. ಆತ್ಮವು ಪರಮಾತ್ಮನ ಜೊತೆ ಬುದ್ಧಿಯೋಗವನ್ನು ಇಡುತ್ತದೆ ನಂತರ ಶರೀರ ನಿರ್ವಹಣಾರ್ಥವಾಗಿ ಕರ್ಮ ಮಾಡಲು ಇಲ್ಲಿಗೆ ಬರುತ್ತಾ-ಹೋಗುತ್ತಾ ಇರುತ್ತದೆ. ಆದರೆ ಎಲ್ಲಿಯೇ ಇದ್ದರೂ ಸಹ ನೆನಪಿರಬೇಕು. ನಿಮಗೆ ಗೊತ್ತಿದೆ- ಭಗವಂತನು ಸರ್ವವ್ಯಾಪಿಯಲ್ಲ. ಅವರಂತೂ ತಂದೆಯಾಗಿದ್ದಾರೆ ಅಂದಮೇಲೆ ತಂದೆಯಿಂದ ಆಸ್ತಿಯು ಸಿಗುತ್ತದೆ. ಸರ್ವವ್ಯಾಪಿ ಎಂದು ಹೇಳುವುದರಿಂದ ಯಾವುದೇ ಅರ್ಥವು ಬರುವುದಿಲ್ಲ. ತಂದೆಯಂತೂ ಅಸ್ತಿಯನ್ನು ಕೊಡಬೇಕಾಗುತ್ತದೆ. ನನಗೆ ಆಸ್ತಿಯು ಸಿಗಬೇಕೆನ್ನುವ ಆಸೆಯು ಅವರಿಗಿರುವುದಿಲ್ಲ. ಮಕ್ಕಳಿಗೆ ಆಸ್ತಿಯನ್ನು ಕೊಡಬೇಕೆನ್ನುವ ಆಸೆಯು ಇರುತ್ತದೆ ಹಾಗೆಯೇ ಈ ತಂದೆಯ ಮನಸ್ಸಿನಲ್ಲಿಯೂ ಸಹ ನಾನು ಆಸ್ತಿಯನು ಕೊಡಬೇಕೆಂಬುದೇ ಇದೆ. ಇದು ತಂದೆ ಮತ್ತು ಮಕ್ಕಳ ಸಂಬಂಧವಾಗಿದೆ, ಮಕ್ಕಳು ಆಸ್ತಿಯನ್ನು ತೆಗೆದುಕೊಳ್ಳಬೇಕು. ತಂದೆಯು ಕೊಡಬೇಕಾಗಿದೆ. ತಂದೆಯು ಮಕ್ಕಳಿಂದ ಏನನ್ನು ಪಡೆಯುತ್ತಾರೆ! ಅವರಂತೂ ಕೊಡಬೇಕಾಗುತ್ತದೆ. ಸತ್ಯವಂತ ಮಕ್ಕಳಿಗೆ ಸಾಹೇಬ ತಂದೆಯು ರಾಜಿಯಾಗುತ್ತಾರೆ ಅಂದಮೇಲೆ ಎಷ್ಟೊಂದು ಸತ್ಯವಂತರಾಗಬೇಕು. ನೀವೆಲ್ಲರೂ ಮಕ್ಕಳಾಗಿದ್ದೀರಿ ಅಂದಮೇಲೆ ಆಸ್ತಿಯನ್ನು ಕೊಡುವಂತಹ ತಂದೆಯನ್ನು ನೆನಪು ಮಾಡಬೇಕು. ಕಚ್ಚಾ ಮಕ್ಕಳಿಗೆ ನೆನಪಿರುವುದಿಲ್ಲ. ಶರೀರ ನಿರ್ವಹಣೆಗಾಗಿ ಭಲೆ ಕರ್ಮವನ್ನು ಮಾಡಿ. ಬಿಡುವಿನ ಸಮಯದಲ್ಲಿ ತಂದೆಯನ್ನು ನೆನಪು ಮಾಡಿ ಆಗ ನಿಮ್ಮ ನೆನಪಿನ ರಿಜಿಸ್ಟರ್ ಸರಿಯಾಗುತ್ತಾ ಹೋಗುವುದು ಮತ್ತು ಖುಷಿಯಿರುವುದು. ಮನುಷ್ಯರಿಗೆ ಯಾವುದೇ ಅಭ್ಯಾಸವಾಗುತ್ತಾ ಹೋಗುತ್ತದೆಯೆಂದರೆ ಅದು ವೃದ್ಧಿಯನ್ನು ಪಡೆಯುತ್ತದೆ. ಬುದ್ಧಿಯಲ್ಲಿರಬೇಕು- ನಮ್ಮ 84 ಜನ್ಮಗಳು ಪೂರ್ಣವಾಯಿತು,ಈಗ ಈ ನಾಟಕವು ಪೂರ್ಣವಾಯಿತು. ಈಗ ನಾವು ನಮ್ಮ ಮನೆಗೆ ಹೋಗುತ್ತೇವೆ ಆದ್ದರಿಂದ ತಂದೆಯು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡಿ. ಭಗವದ್ಗೀತೆಯಲ್ಲಿಯೂ ಸಹ ಎರಡುಬಾರಿ ಮನ್ಮನಾಭವ ಎಂದು ಬರೆಯಲಾಗಿದೆ. ಹಿಟ್ಟಿನಲ್ಲಿ ಉಪ್ಪಿನಷ್ಟು ಕೆಲಕೆಲವು ಮಾತು ಸರಿಯಾಗಿವೆ.

ಅನ್ಯಧರ್ಮದವರ ಯಾವುದೇ ಚಿತ್ರ ಇತ್ಯಾದಿಗಳಿರುವುದಿಲ್ಲ ನಿಮ್ಮ ಚಿತ್ರಗಳಿವೆ. ಬ್ರಹ್ಮಾರವರದೂ ಸಹ ಅಜ್ಮೀರ್ನಲ್ಲಿ ಚಿತ್ರವಿದೆ. ಬ್ರಾಹ್ಮಣರಲ್ಲಿಯೂ ಸಹ ಅನೇಕ ಪ್ರಕಾರದವರಿದ್ದಾರೆ. ಭಿನ್ನ-ಭಿನ್ನ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಭಾಷೆಗಳೂ ಸಹ ನೋಡಿ ಎಷ್ಟಿವೆ! ಮಕ್ಕಳಿಗೆ ಗೊತ್ತಿದೆ- ನಮ್ಮ ರಾಜಧಾನಿಯಲ್ಲಿ ಒಂದೇ ಭಾಷೆಯಿರುವುದು. ಅಲ್ಲಿಯ ಭಾಷೆಯೇ ಬೇರೆಯಾಗಿದೆ. ಸಂಸ್ಕೃತ ಮುಂತಾದವುಗಳಿರುವುದಿಲ್ಲ. ಮಕ್ಕಳು ಅಲ್ಲಿಯ ಭಾಷೆ ಇತ್ಯಾದಿಗಳನ್ನು ಮೊದಲು ತಿಳಿಸುತ್ತಿದ್ದರು. ಈಗ ನೀವು ಮಕ್ಕಳಿಗೆ ಖುಷಿಯಿರಬೇಕು. ನಾವು ರಾಜಧಾನಿಯನ್ನು ಸ್ಥಾಪನೆ ಮಾಡುತ್ತಿದ್ದೇವೆ ನಂತರ ಅಲ್ಲಿ ನಿಮ್ಮದೇ ಭಾಷೆಯಿರುವುದು. ಇಲ್ಲಿಯ ಭಾಷೆಗಳು ಅಲ್ಲಿರಲು ಸಾಧ್ಯವಿಲ್ಲ. ನಾಟಕದ ನಿಗಧಿಯನುಸಾರ ಪುನಃ ಅದೇ ನಮ್ಮ ಮಹಲುಗಳು ಮುಂತಾದವುಗಳಾಗುತ್ತವೆ ಕಲ್ಪದ ಹಿಂದಿನಂತೆ. ಇಲ್ಲಿ ಈ ಬ್ರಿಟಿಷ್ ಸರ್ಕಾರವು ನವದೆಹಲಿಯನ್ನು ಮಾಡಿದರಲ್ಲವೆ. ನಿಮಗೆ ಗೊತ್ತಿದೆ- ನಾವು ದೆಹಲಿಯ ಹೆಸರನ್ನು ಸತ್ಯಯುಗದಲ್ಲಿ ಇಡುವುದಿಲ್ಲ. ಈ ಹಳೆಯ ಪ್ರಪಂಚವಂತೂ ಸಮಾಪ್ತಿಯಾಗಲಿದೆ. ನಮಗೆ ಹೊಸದಕ್ಕಿಂತ ಹೊಸಪ್ರಪಂಚವು ಬೇಕು. ಅಲ್ಲಂತೂ ವಜ್ರರತ್ನಗಳ ಮಹಲುಗಳಿರುತ್ತವೆ. ಈಗ ಈ ಮಹಲುಗಳಿಲ್ಲ. ನಾವು ಬಹಳ ಸುಂದರವಾದ ಮಹಲುಗಳನ್ನು ಮಾಡುತ್ತೇವೆ. ಇದಂತೂ ಛೀ ಛೀ ಪ್ರಪಂಚವಾಗಿದೆ ಎಂದು ಬುದ್ಧಿಯು ಹೇಳುತ್ತದೆ. ಹೀಗೆ ಪರಸ್ಪರ ಮಾತನಾಡಿಕೊಳ್ಳಬೇಕು. ಸಹೋದರ ಅಥವಾ ಸಹೋದರಿಯರೇ ನಾವೀಗ ನಮ್ಮ ಮನೆಗೆ ಹೋಗುತ್ತೇವೆ. ಮತ್ತೆ ಬಂದು ನಮ್ಮ ರಾಜಧಾನಿಯನ್ನು ಸಂಭಾಲನೆ ಮಾಡುತ್ತೇವೆ. ಇಂತಿಂತಹ ವಸ್ತ್ರಗಳನ್ನು ಧರಿಸುತ್ತೇವೆ. ಮೊದಲು ಎಲ್ಲರೂ ಶುದ್ಧ ಆಭರಣಗಳನ್ನು ಧರಿಸುತ್ತಿದ್ದರು. ಲಕ್ಷ್ಮೀ-ನಾರಾಯಣರ ಮಂದಿರದಲ್ಲಿಯೂ ಸಹ ಎಷ್ಟು ಆಭರಣಗಳಿರಬಹುದು. ಶಿವನ ಮಂದಿರವು ಹೇಗಿರುತ್ತದೆ? ಶಿವಲಿಂಗವನ್ನೂ ಸಹ ವಜ್ರದಿಂದ ಮಾಡಿಸುತ್ತಾರೆ. ಇವೂ ಸಹ ತಿಳಿದುಕೊಳ್ಳುವ ಮಾತುಗಳಾಗಿವೆ. ನಮ್ಮ ಶಿವತಂದೆಯ ಮಂದಿರವನ್ನು ಮುಸಲ್ಮಾನರು ಬಂದು ಲೂಟಿ ಮಾಡಿದ್ದಾರೆ, ಯಾವ ಮಂದಿರವನ್ನು ಭಕ್ತಿಮಾರ್ಗದ ಪ್ರಾರಂಭದಲ್ಲಿ

ಮಾಡಲಾಗಿತ್ತು. ನೀವು ಮಕ್ಕಳಿಗೆ ತಿಳಿದಿದೆ- ಇಂದಿಗೆ 2500 ವರ್ಷಗಳ ಹಿಂದೆ ಶಿವತಂದೆಯ ಮಂದಿರ ನಿರ್ಮಾಣವಾಯಿತು. ನಾವೇ ಪೂಜ್ಯ ಮತ್ತೆ ಪೂಜಾರಿಗಳಾಗುತ್ತೇವೆ. ಸೋಮನಾಥನ ಮಂದಿರವೂ ಸಹ ಆಗಿದೆ. ಜ್ಞಾನಕ್ಕೆ ಸೋಮರಸವೆಂದು ಹೇಳಲಾಗುತ್ತದೆ. ಜ್ಞಾನವನ್ನು ಕೊಡುವವರು ತಂದೆಯಾಗಿದ್ದಾರೆ. ಅವರಿಂದ ನೀವು ಧನವಂತರಾಗುತ್ತೀರಿ ನಂತರ ಅದೇ ಹಣದಿಂದ ನೀವು ತಂದೆಯ ಮಂದಿರವನ್ನು ಕಟ್ಟುತ್ತೀರಿ. ಪೂಜೆಯೂ ಆಗುತ್ತದೆಯಲ್ಲವೆ. ಮನೆ-ಮನೆಯಲ್ಲಿಯೂ ಮಂದಿರಗಳನ್ನು ಮಾಡುತ್ತಾರೆ. ಯಾವಾಗ ಭಕ್ತಿಮಾರ್ಗವು ಪ್ರಾರಂಭವಾಯಿತೋ ಆಗ ನಾವೇ ಪೂಜಾರಿಗಳಾಗಿ ಮೂರ್ತಿ ಇತ್ಯಾದಿಗಳನ್ನು ಮಾಡುತ್ತೇವೆಂದು ಮಕ್ಕಳಿಗೆ ತಿಳಿದಿದೆ. ನಾವೀಗ ಒಬ್ಬ ಪ್ರಿಯತಮ ಪರಮಾತ್ಮನಿಗೆ ಅವರಿಂದ ಆಸ್ತಿಯನ್ನು ಪಡೆಯುವುದಕ್ಕಾಗಿ ನಾವು ಪ್ರಿಯತಮೆಯರಾಗಿದ್ದೇವೆ. ಮನುಷ್ಯರು ವಿಕಾರಕ್ಕಾಗಿ ಪ್ರಿಯತಮೆಯರಾಗುತ್ತಾರೆ. ಇಲ್ಲಿ ಆತ್ಮವು ಪರಮಾತ್ಮ ಪ್ರಿಯತಮನ ಪ್ರಿಯತಮೆಯಾಗುವುದು. ನೋಡುತ್ತೀರಿ- ಎಲ್ಲಾ ಭಕ್ತರು ಅವರನ್ನೇ ನೆನಪು ಮಾಡುತ್ತಾರೆ. ಆ ಪ್ರಿಯತಮನ ಮಹಿಮೆಯು ಎಷ್ಟು ಶ್ರೇಷ್ಠವಾಗಿದೆ! ಈ ಪ್ರಿಯತಮನು ಯಾರು ಪತಿತರಾಗಿಬಿಟ್ಟಿದ್ದಾರೆಯೋ ಅವರನ್ನು ಪಾವನ ಮಾಡುತ್ತಾರೆ. ಆತ್ಮವೇ ಪತಿತ, ಆತ್ಮವೇ ಪಾವನವಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿದ್ಯಾರ್ಥಿವೇತನವನ್ನು ಪಡೆಯಲು ಚೆನ್ನಾಗಿ ಓದಬೇಕು. ಸಿಂಹಾಸನಾಧಿಕಾರಿಗಳಾಗುವ ಓಟವನ್ನು ಓಡಬೇಕು, ಕರ್ಮ ಮಾಡುತ್ತಾ ನೆನಪಿನಲ್ಲಿರಬೇಕಾಗಿದೆ.

2. ನಾವು ಆತ್ಮಿಕ ಯಾತ್ರೆಯಲ್ಲಿದ್ದೇವೆ ಆದ್ದರಿಂದ ಮತ್ತೆಲ್ಲರ ನೆನಪನ್ನು ಬುದ್ಧಿಯಿಂದ ತೆಗೆದು ಒಬ್ಬ ತಂದೆಯ ನೆನಪಿನಲ್ಲಿ ನಿರಂತರ ಇರಬೇಕಾಗಿದೆ. ನೆನಪಿನ ರಿಜಿಸ್ಟರನ್ನು ಸರಿಯಾಗಿಟ್ಟುಕೊಳ್ಳಬೇಕಾಗಿದೆ.

ವರದಾನ: ನಿರಂತರ ಯೋಗಿ ಮತ್ತು ಪವಿತ್ರರಾಗಿ ಸರ್ವ ವಿಕಾರಗಳಿಗೆ ವಿದಾಯ ಕೊಡುವಂತಹ ಶಕ್ತಿ ಸ್ವರೂಪ, ಪೂಜ್ಯ ಸ್ವರೂಪ ಭವ

ತಂದೆಯ ಮೂಲಕ ಎಲ್ಲಾ ಮಕ್ಕಳಿಗೂ ಮುಖ್ಯ ಎರಡು ವರದಾನ ಪ್ರಾಪ್ತಿಯಾಗುವುದು- ಒಂದು ಸದಾ ಯೋಗಿ ಭವ, ಇನ್ನೊಂದು ಪವಿತ್ರ ಭವ. ಈ ಎರಡು ವರದಾನಗಳನ್ನು ಜೀವನದಲ್ಲಿ ಸದಾ ಅನುಭವ ಮಾಡುವರು ಅವರು ಕೇವಲ 2-4 ಗಂಟೆಗಳ ಯೋಗಿಗಳಾಗಿರುವುದಿಲ್ಲ ಆದರೆ ನಿರಂತರದ ಯೋಗಿಗಳಾಗಿರುತ್ತಾರೆ. ಪವಿತ್ರ ಸಹ ಕೆಲವೊಮ್ಮೆ ಅಲ್ಲ, ಸದಾ ಪವಿತ್ರ ಮತ್ತು ಸರ್ವ ವಿಕಾರಗಳಿಗೆ ವಿಧಾಯಿ ಕೊಡುವಂತಹವರಾಗಿರುತ್ತಾರೆ. ಹೀಗಲ್ಲ ಕೆಲವೊಮ್ಮೆ ಕ್ರೋಧ ಅಥವಾ ಮೋಹ ಬಂದುಬಿಟ್ಟಿತು ಎಂದು, ಯಾವುದೇ ವಿಕಾರವೂ ಸಹ ಸ್ಮೃತಿ ಸ್ವರೂಪರಾಗಲು ಬಿಡುವುದಿಲ್ಲ. ಆದ್ದರಿಂದ ಇಂತಹ ಯೋಗಿಗಳೇ ಶಕ್ತಿಸ್ವರೂಪರಾಗಿದ್ದಾರೆ ಮತ್ತು ಸದಾ ಪವಿತ್ರರಾಗಿರುವಂತಹ ಪೂಜ್ಯ ಸ್ವರೂಪರಾಗಿರುತ್ತಾರೆ.

ಸ್ಲೋಗನ್: ಸದಾ ಜ್ಞಾನ ಸೂರ್ಯನ ಸಮ್ಮುಖದಲ್ಲಿದ್ದಾಗ ಭಾಗ್ಯ ರೂಪಿ ನೆರಳು ನಿಮ್ಮ ಜೊತೆಯೇ ಇರುವುದು.